		ಲಕ್ಷ್ಮೀ ಕಾಂಪ್ಲೆಕ್ಸ್, ನೀಲಿಜಿನ್ ರಸ್ತೆ, ಹುಬ್ಬಳ್ಳಿ–580 029. 3. ಮೆ.ಸೇಫ್ ಜೆನ್ ಸೆಕ್ಯೂರ್ ಟೆಕ್, ನಂ.464, 3ನೇ ಮಹಡಿ, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು–560 079	ವಿದ್ಯಾನಗರ, ಹುಬ್ಬಳ್ಳಿ–580 029.	

ತುರುವೇಕೆರೆ ತಾಲ್ಲೂಕಿನಲ್ಲಿ ಏತ ನೀರಾವರಿ ಕಾಮಗಾರಿಗಳು

10(10) ಶ್ರೀ ಎಂ.ಟಿ.ಕೃಷ್ಣಪ್ಪ:(ತುರುವೇಕೆರೆ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ, ಅಮ್ಮಸಂದ್ರ, ಅರೇಮಾರನಹಳ್ಳಿ, ಮುದ್ದನಹಳ್ಳಿ ಗ್ರಾಮಗಳಿಗೆ ಏತ ನೀರಾವರಿ ಕಾಮಗಾರಿಗೆ ಚಾಲನೆ ನೀಡಲಾತ್ತದೆಯೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು ಮತ್ತು ಅದರ ಅಂದಾಜು ವೆಚ್ಚವೆಷ್ಟು?

ಇ) ಏತ ನೀರಾವರಿ ಕಾಮಗಾರಿಯನ್ನು ಎಷ್ಟು ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುವುದು ಹಾಗೂ ಇದರಿಂದಾಗಿ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಲಭಿಸುವುದು, (ವಿವರವಾದ ಮಾಹಿತಿ ನೀಡುವುದು).

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು):

ಅ) ಇಲ್ಲ. ಹೇಮಾವತಿ ಯೋಜನೆಯ ನಾಗಮಂಗಲ ಶಾಖಾ ನಾಲೆಯ ಸರಪಳಿ 43150 ಮೀ ನಿಂದ 16.10 ಕ್ಯೂಸೆಕ್ಸ್ (29.11 ಎಂ.ಸಿ.ಎಫ್.ಟಿ) ನೀರನ್ನು ಎತ್ತಿ ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ, ಅರೆಮಾರನಹಳ್ಳಿ ಮತ್ತು ಇತರೆ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ

ಯೋಜನೆಯ ಅಂದಾಜನ್ನು ರೂ.305.00 ಲಕ್ಷಗಳಿಗೆ ತಯಾರಿಸಲಾಗಿತ್ತು. ಈ ಪ್ರಸ್ತಾವನೆ ಬಗ್ಗೆ ದಿನಾಂಕ:08.11.2006 ರಂದು ನಡೆದ ಕಾವೇರಿ ನೀರಾವರಿ ನಿಗಮದ ಮಂಡಳಿಯ 15ನೇ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿದ್ದು, ನಂತರ ಇವು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಾಗಿರುವುದರಿಂದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖಾಂತರ ತೆಗೆದುಕೊಳ್ಳುವುದರಿಂದ ಕೇಂದ್ರ ಸರ್ಕಾರದ ಅನುದಾನವೂ ಲಭ್ಯವಾಗುತ್ತದೆ, ಆ ಕಾರಣ ಈ ಯೋಜನೆಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಸ್ತಾಂತರಿಸುವುದು ಸೂಕ್ತವೆಂದು ತೀರ್ಮಾನಿಸಿ ಮಂಡಳಿ ಸಭೆಯಲಿ ನಿರ್ಣಯಿಸಲಾಗಿರುತ್ತದೆ.

ಸದರಿ ಕುಡಿಯುವ ನೀರಿನ ಯೋಜನೆಗೆ ಒಟ್ಟು 29.11 ಎಂ.ಸಿ.ಎಫ್.ಟಿ. ನೀರಿನ ಅವಶ್ಯಕತೆ ಇದ್ದು, ಇದಕ್ಕೆ ಹೇಮಾವತಿ ಯೋಜನಾ ವರದಿಯಲ್ಲಿ ಅವಕಾಶ ಇರುವುದಿಲ್ಲ.

ಆದರೆ, ಕಾವೇರಿ ನ್ಯಾಯಾಧೀಕರಣದ ದಿನಾಂ:05.02.2007 ರ ತೀರ್ಪಿನಲ್ಲಿ ಹೇಮಾವತಿ ಯೋಜನೆಗೆ ಒಟ್ಟಾರೆ ಬೇಡಿಕೆಯಾದ 54.67 ಟಿ.ಎಂ.ಸಿ.ಗೆ ಎದುರಾಗಿ 43.67 ಟಿ.ಎಂ.ಸಿ. ಮಾತ್ರ ನೀರಿನ ಹಂಚಿಕೆಯಾಗಿರುತ್ತದೆ ಮತ್ತು ಈ ಯೋಜನೆಗೆ ನೀರಿನ ಹಚಿಚಿಕೆ ಇರುವುದಿಲ್ಲ. ಸದರಿ ಯೋಜನೆಗೆ ನೀರನ್ನು ಹೇಮಾವತಿ ಯೋಜನೆಯ ನಾಗಮಂಗಲ ಶಾಖಾ ನಾಲೆಯಿಂದ ಒದಗಿಸಬೇಕಾಗಿರುತ್ತದೆ. ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನ ವಿರುದ್ಧವಾಗಿ ಕರ್ನಾಟಕ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ವಾದಕಾಲೀನ ಅರ್ಜಿಯನ್ನು ಸಲ್ಲಿಸಿದ್ದು, ಅಂತಿಮ ತೀರ್ಪಿನಲ್ಲಿ ಕೈಬಿಟ್ಟಿರುವ ಹಾಗೂ ಯಾವುದೇ ಹೊಸ ಯೋಜನೆಗಳನ್ನು ಪರಿಗಣಿಸಬಾರದೆಂದು ಕೋರಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಮ ಬಂದ ನಂತರ, ಸದರಿ ತೀರ್ಪನ್ನು ಆಧರಿಸಿ, ಈ ಯೋಜನೆಗೆ ನೀರಿನ ಲಭ್ಯತೆ ಬಗ್ಗೆ ಪರಿಶೀಲಿಸಲಾಗುವುದು.

ಅಮ್ಮಸಂದ್ರ ಹಾಗೂ ಮುದ್ದನಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ನೀರಿನ ಲಭ್ಯತೆ ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಕಾಮಗಾರಿಗೆ ಮಂಜೂರಾತಿ ನೀಡುವ ಸಮಯದಲ್ಲಿ ಕಾಲಮಿತಿಯನ್ನು ನಿಗಧಿಪಡಿಸಲಾಗುವುದು.

ಯೋಜನೆಯು ಕುಡಿಯುವ ನೀರಿಗೆ ಮಾತ್ರ ಸೀಮಿತವಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೈಗಾರಿಕಾ ಪ್ರದೇಶಗಳ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು

11(37) ಶ್ರೀ ವೆಂಕಟಶಿವಾರೆಡ್ಡಿ ಜಿ ಕೆ:(ಶ್ರೀನಿವಾಸಪುರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಪ್ರದೇಶಗಳ ರಸ್ತೆಗಳನ್ನು ಮೇಲ್ದರ್ಜೇಗೇರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ, ಹಾಗಿದ್ದಲ್ಲಿ, ಕೈಗೊಂಡಿರುವ ಕೈಗಾರಿಕಾ ಪ್ರದೇಶಗಳಾವುವು;

ಆ) 2009–10 ರಲ್ಲಿ ಪ್ರತಿ ಪ್ರದೇಶಕ್ಕೂ ನಿಗದಿಪಡಿಸಲಾದ, ಬಿಡುಗಡೆಯಾದ ಹಾಗೂ ಖರ್ಚು ಮಾಡಿದ ಹಣವೆಷ್ಟು (ಪೂರ್ಣ ಮಾಹಿತಿ ನೀಡುವುದು);

ಇ) ಕೈಗಾರಿಕಾ ರಸ್ತೆ ಅಭಿವೃದ್ಧಿಗಾಗಿ ಸಮಿತಿಯನ್ನು ರಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಈ ಸಮಿತಿಯ ಕಾರ್ಯ ವೈಖರಿಗಳೇನು;

ಈ) ಸದರಿ ಸಮಿತಿಯ ಕಾರ್ಯ ನಿರ್ವಹಿಸುತ್ತಿದೆಯೇ, ನಿರ್ವಹಿಸದಿದ್ದಲ್ಲಿ ಕಾರಣಗಳೇನು?

ಶ್ರೀ ಮುರಗೇಶ್ ಆರ್ ನೀರಾಣಿ(ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಕಳೆದ 4 ವರ್ಷಗಳಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾದ ಕೈಗಾರಿಕಾ ಪ್ರದೇಶದ ಹೆಸರುಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.